**18-03-2015**

ದಿನಾಂಕ: 18-03-2015-11.30(04) AJ/CP

# <u>ಕರ್ನಾಟಕ ವಿಧಾನಸಭೆ</u>

ಬುಧವಾರ, 18ನೇ ಮಾರ್ಚ್ 2015 ರಂದು ಸದನವು

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 33 ನಿಮಿಷಕ್ಕೆ ಸಮಾವೇಶಗೊಂಡಿತು.

ಅಧ್ಯಕ್ಷರಾದ **ಶ್ರೀ ಕಾಗೋಡು ತಿಮ್ಮಪ್ಪ**ರವರು

ಪೀಠವನ್ನು ಅಲಂಕರಿಸಿದ್ದರು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**(ಸದನವು ಬೆಳಿಗ್ಗೆ 11 ಗಂಟೆ 33 ನಿಮಿಷಗಳಿಗೆ ಸಮಾವೇಶಗೊಂಡಿತು)**

**(ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು.)**

(ಭಾರತೀಯ ಜನತಾ ಪಕ್ಷ ಮತ್ತು ಜನತಾದಳ (ಜಾತ್ಯತೀತ) ಪಕ್ಷದ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಿರತರಾಗಿದ್ದರು)

(ಗೊಂದಲ)

ಅಧ್ಯಕ್ಷರು : ಈಗ ಒಂದು ಪ್ರಕಟಣೆ ಇದೆ.

**ಪ್ರಕಟಣೆ**

ದಿನಾಂಕ 16.3.2015 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಈ ಕೆಳಕಂಡಂತೆ ತೀರ್ಮಾನಿಸಲಾಗಿದೆಯೆಂದು ಈ ಮೂಲಕ ಸದನದ ಗಮನಕ್ಕೆ ತರಲಾಗಿದೆ.

ದಿನಾಂಕ 27.3.2015 ರವರೆಗೆ ಆಯವ್ಯಯದ ಮೇಲೆ ಚರ್ಚೆ ನಡೆಯಲಿದೆ. ಆಯವ್ಯಯದ ಮೇಲೆ ನಡೆದ ಸಾಮಾನ್ಯ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಗಳು ದಿನಾಂಕ 30.3.2015 ರಂದು ಬೆಳಿಗ್ಗೆ ಉತ್ತರ ನೀಡಲಿದ್ದಾರೆ. ತದನಂತರ ಧನವಿನಿಯೋಗ ವಿಧೇಯಕ ಹಾಗೂ ಇತರೆ ಸಂಬಂಧಿತ ವಿಧೇಯಕಗಳು ಅಂಗೀಕಾರವಾಗಲಿವೆ. ಪ್ರಸ್ತುತ ಅಧಿವೇಶನದ ಅವಧಿಯಲ್ಲಿ ದಿನಾಂಕ 20.3.2015 ರಂದು ಪೂರಕ ಅಂದಾಜುಗಳ ಮಂಡನೆ ಹಾಗೂ ದಿನಾಂಕ 23.3.2015 ರಂದು ಚರ್ಚೆ ನಡೆದು ಅಂಗೀಕೃತವಾಗಲಿದೆ. ಅಧಿವೇಶನದ ಅವಧಿಯಲ್ಲಿ ಇತರೆ ವಿಧೇಯಕಗಳಿದ್ದಲ್ಲಿ ಅವುಗಳ ಮಂಡನೆ ಮತ್ತು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುವುದು.

**18-03-2015**

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ : ಮಾನ್ಯ ಅಧ್ಯಕ್ಷರೆ, ಇವರು ಮೊಂಡುತನವನ್ನು ಮಾಡುತ್ತಿದ್ದಾರೆ. ಈ ಪ್ರಕರಣವನ್ನು ಮುಚ್ಚಿ ಹಾಕುವಂತಹ ಕೆಲಸ ಮಾಡುತ್ತಿದ್ದಾರೆ. ಡಿ.ಕೆ. ರವಿ ಅವರ ನಿಗೂಢ ಸಾವಾಗಿದೆ. ಹೀಗಾಗಿ ಇವರು ಈ ಪ್ರಕರಣವನ್ನು ಮುಚ್ಚಿ ಹಾಕುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಈ ಪ್ರಕರಣವನ್ನು ಸಿ.ಬಿ.ಐ. ಗೆ ಕೊಟ್ಟರೆ, . . .(ಗೊಂದಲ)

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯಕರೆ, ...

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಅವಕಾಶವನ್ನು ಕೊಡಿ.

(ಗೊಂದಲ)

ಅಧ್ಯಕ್ಷರು : ಮಾನ್ಯ ಅಶೋಕ್ ರವರು ಏನೋ ಮಾತನಾಡಬೇಕೆಂದು ಹೇಳುತ್ತಿದ್ದಾರೆ. ಒಂದು ನಿಮಿಷ ಇರಿ. ಸ್ವಲ್ಪ ತಾಳಿ.

(ಗೊಂದಲ)

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೆ, ನಿನ್ನೆಯಿಂದಲೂ ಧರಣಿ ಮಾಡುತ್ತಿದ್ದೇವೆ, ರಾತ್ರಿಯೂ ಸಹ ಧರಣಿ ಮಾಡಿದ್ದೇವೆ. ತಾವೂ ಕೂಡ ಇಲ್ಲಿಗೆ ಬಂದಿದ್ದೀರಿ. ಇವತ್ತು ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಸುದ್ದಿಗಳನ್ನು ನೀಡುತ್ತಿದೆ. ಈ ಬಗ್ಗೆ ಜನರಲ್ಲಿ ಮತ್ತು ಮಾಧ್ಯಮಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಸುದ್ದಿಗಳನ್ನು ಬಿತ್ತರ ಮಾಡುವ ಮುಖಾಂತರ indirect ಆಗಿ ಡಿ.ಕೆ. ರವಿ ಅವರ ವ್ಯಕ್ತಿ ಚಾರಿತ್ರ್ಯವನ್ನು ಹರಣ ಮಾಡುತ್ತಿದ್ದಾರೆಂದು ತಿಳಿದು ಬಂದಿರುತ್ತದೆ. ನಾನು ಇವತ್ತೂ ಸಹ ಅವರ ಮಾವನವರಾದ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹನುಮಂತರಾಯಪ್ಪನವರ ಜೊತೆಯಲ್ಲಿ ದೂರವಾಣಿಯಲ್ಲಿ ಮಾತನಾಡಿದ್ದೇನೆ. ಅವರ ಕೌಟುಂಬಿಕ ಸಮಸ್ಯೆಗಳ ಬಗ್ಗೆ ಮಾತನಾಡಿದೆ. ಸಾರಸಗಟಾಗಿ ಅವರು ಹೇಳುವುದೇನೆಂದರೆ, ನನ್ನ ಮಗಳು ಮತ್ತು ನನ್ನ ಅಳಿಯ ಬಹಳ ಅನ್ಯೋನ್ಯತೆಯಿಂದ ಇದ್ದರು. ಬೆಳಿಗ್ಗೆ ಹೊರಡುವಾಗಲೂ ಜೊತೆಯಲ್ಲಿ ನಗುನಗುತ್ತಾ ಮಾತನಾಡಿಕೊಂಡೇ ಹೊರಟರು. ಯಾವುದೇ ರೀತಿಯಾದಂತಹ ಕೌಟುಂಬಿಕ ಕಲಹಗಳು ಕೂಡ ಇಲ್ಲವೆಂದು ಹೇಳುತ್ತಾರೆ. ಅವರ ತಂದೆ ತಾಯಿಯವರನ್ನು ಕರೆದುಕೊಂಡು ಬರಬೇಕೆಂದು ಹೇಳಿ, ಅವರ ಸೊಸೆಯೇ ದೂರವಾಣಿಯಲ್ಲಿ ಮಾತನಾಡಿ ವಾರಕ್ಕೆ ನಾಲ್ಕು ದಿವಸ ನಮ್ಮ ಜೊತೆ ಇರಬೇಕೆಂದು ಹೇಳಿದ್ದಾರೆ. ಈ ರೀತಿಯ ಸುದ್ಧಿಗಳನ್ನು ಹಬ್ಬಿಸುವುದರಿಂದ ಜನರಲ್ಲಿ ಗೊಂದಲ, ಆಕ್ರೋಶ ಇನ್ನೂ ಜಾಸ್ತಿಯಾಗುತ್ತದೆ. ಸರ್ಕಾರದ ಈ ನಡೆಯಿಂದ ನಿನ್ನೆಯ ದಿವಸ ಕೋಲಾರ ಬಂದ್ ಆಯಿತು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ನಾವು ಹಬ್ಬಿಸುತ್ತಿರುವುದಲ್ಲ, ನೀವು ಹಬ್ಬಿಸುತ್ತಿರುವುದು.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್, ಮಾನ್ಯ ಗೃಹ ಸಚಿವರು : (ಗೊಂದಲ) . . .ಸುದ್ದಿ ಮಾಡುವವರು ನೀವೇ. ನಿಮಗೆ ಇದೇ ಬೇಕಾಗಿರುವುದು, ಬಿ.ಜೆ.ಪಿ. ಅವರೇ ಮಾಡುತ್ತಿರುವುದು, ಬೇರೆ ಯಾರೂ ಮಾಡುತ್ತಿಲ್ಲ. ಚುನಾವಣೆ ಮೂಲಕ ಬನ್ನಿ. ಚುನಾವಣೆಯಲ್ಲಿ ಸೋತು ಅಧಿಕಾರವನ್ನು ಕಳೆದುಕೊಂಡು ಮಾತನಾಡುತ್ತಿದ್ದೀರಿ.

(ಗೊಂದಲ)

ಅಧ್ಯಕ್ಷರು : ಬೇಡ, ಬೇಡ, ಅದೆಲ್ಲಾ ಬೇಡ.

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಜನರು ಆಕ್ರೋಶರಾಗಿದ್ದಾರೆ. ನಿನ್ನೆ ನಾನು ಹುಲಿಯೂರುದುರ್ಗಕ್ಕೆ ಹೋಗಿದ್ದೆ. ಅಲ್ಲಿ ನಡೆದ ಅಂತ್ಯ ಕ್ರಿಯೆಯಲ್ಲಿ ಭಾಗವಹಿಸಿದ್ದೆ. ಅಲ್ಲಿನ ಜನರ ಭಾವನೆಗಳನ್ನು ಮತ್ತು ಆಕ್ರೋಶಗಳನ್ನು ಸರ್ಕಾರ ನೋಡಬೇಕಾಗುತ್ತದೆ. ಸಿ.ಬಿ.ಐ. ತನಿಖೆಯಾಗಬೇಕೆಂದು ಜನರ ಮನಸ್ಸಿನಲ್ಲಿ ಬಂದಿದೆ. ದಾರಿ ತಪ್ಪಿಸುವ ಕೆಲಸವನ್ನು ಇವರು ಮಾಡುತ್ತಿದ್ದಾರೆ. ಈ ಪ್ರಕರಣವನ್ನು ಮುಚ್ಚಿ ಹಾಕುವ ಕೆಲಸವನ್ನು ಮಾಡುತ್ತಿದ್ದಾರೆ. (ಗೊಂದಲ) ...ಇದೊಂದು murder ಎಂದು ರವಿ ಅವರ ಮಾವನವರು certificate ಕೊಟ್ಟಿದ್ದಾರೆ. ಅವರ ಕುಟುಂಬದ ಸದಸ್ಯರು ಈ ಪ್ರಕರಣ ಸಿ.ಬಿ.ಐ. ತನಿಖೆಗೆ ನೀಡಬೇಕೆಂದು ಒತ್ತಾಯ ಮಾಡುತ್ತಿದ್ದಾರೆ.

(ಗೊಂದಲ)

ಶ್ರೀ ಪಿ.ಎಂ. ಅಶೋಕ್ : Dead body ಇಟ್ಟುಕೊಂಡು ರಾಜಕೀಯ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಇದರಲ್ಲಿ ಪ್ರತಿಷ್ಠೆ ಮಾಡುತ್ತಿದ್ದೀರಿ. ಏತಕ್ಕೆ ಪ್ರತಿಷ್ಠೆ ಮಾಡುತ್ತಿದ್ದೀರಿ? ನೀವು ರಾಜಕೀಯ ಮಾಡುತ್ತಿದ್ದೀರಿ. ಇದರಲ್ಲಿ ಏನು ಪ್ರತಿಷ್ಠೆ ಮಾಡುತ್ತಿದ್ದೀರಿ. ನಿಮಗೇನೂ ತೊಂದರೆಯಿಲ್ಲವೆಂದರೆ ಸಿ.ಬಿ.ಐ.ಗೆ ಕೊಡಿ. ಎಲ್ಲಾ ಪುರಾವೆಗಳು ಹೊರಗೆ ಬರುತ್ತದೆ. ಇದರಲ್ಲಿ ಯಾರ್‍ಯಾರು ಇದ್ದಾರೆ, ಯಾವ ಯಾವ ಶಕ್ತಿ ಅಡಗಿದೆ ಎನ್ನುವುದೆಲ್ಲಾ ಹೊರಗಡೆ ಬರುತ್ತದೆ. ಪೋಸ್ಟ್ ಮಾರ್ಟಮ್ ಹತ್ತಿರ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದರು. ಮನೆಗೆ ಹೋಗಿ ಶರೀರವನ್ನು ನೋಡಬೇಕೇ ಹೊರತು ಅಥವಾ ದಫನ್ ಮಾಡುವ ಜಾಗದಲ್ಲಿ ಹೋಗಬೇಕು. ಅದು ಬಿಟ್ಟು ಮಾನ್ಯ ಮುಖ್ಯಮಂತ್ರಿಗಳು ಪೋಸ್ಟ್ ಮಾರ್ಟಮ್ ಹತ್ತಿರ ಏಕೆ ಹೋಗಬೇಕು? Influence ಮಾಡಿ ಈ ಪ್ರಕರಣವನ್ನು ಮುಚ್ಚು ಹಾಕುವ ಕೆಲಸ ರಾಜ್ಯ ಸರ್ಕಾರ ಮಾಡುತ್ತಿದೆ.

(ಗೊಂದಲ)

**18-03-2015**

ಶ್ರೀ ಕೆ.ಜೆ. ಜಾರ್ಜ್: ನಮ್ಮ ಪೊಲೀಸರ ಮೇಲೆ ನಿಮಗೆ ನಂಬಿಕೆ ಇಲ್ಲ, ನಮ್ಮ ಜನರ ಮೇಲೆ ನಿಮಗ ೆ ನಂಬಿಕೆ ಇಲ್ಲ. ನಿಮಗೆಲ್ಲ (ಗೊಂದಲ) . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಹಾಗಾಗಿ ನಿಜವಾಗಿ ಇದರಲ್ಲಿ ಯಾವ್ಯಾವ ದೊಡ್ಡ ವ್ಯಕ್ತಿಗಳಿದ್ದಾರೆನ್ನುವುದು ಹೊರಗಡೆ ಬರಬೇಕು. ಈ ನಿಗೂಢ ಸಾವಿನ ಹಿಂದೆ ಯಾರಿದ್ದಾರೆಂದು ಎಲ್ಲವೂ ಹೊರಗಡೆ ಬರಬೇಕು. ಅದು ಸಿ.ಬಿ.ಐ. ತನಿಖೆಯಿಂದ ಮಾತ್ರ ಸಾಧ್ಯ. ಕೇವಲ ವಿರೋಧ ಪಕ್ಷದ ಬೇಡಿಕೆಯಲ್ಲದೇ, ಇದರಲ್ಲಿ ಜನ ಸಾಮಾನ್ಯರ demand ಸಹ ಇದೆ. ಈ ಪ್ರಕರಣದ ಬಗ್ಗೆ ಸಿ.ಬಿ.ಐ. ತನಿಖೆಯಾಗಲೇ ಬೇಕು.

(ಗೊಂದಲ)

ಅಧ್ಯಕ್ಷರು : ಮಾನ್ಯ ನಾಯಕರೇ, ತಮ್ಮ ನಿಲುವನ್ನು ಸ್ಪಷ್ಟಪಡಿಸಿದ್ದೀರಿ. ಸರ್ಕಾರ ಕೂಡ ತನಿಖೆ ನಡೆಸುತ್ತಿದೆ. . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಸಿ.ಬಿ.ಐ. ತನಿಖೆಗೆ ನೀಡುವವರೆಗೆ ನಾವು ಹೋರಾಟ ಬಿಡುವುದಿಲ್ಲ. ಸಿ.ಬಿ.ಐ. ತನಿಖೆಯಾಗುವವರೆಗೂ ನಮ್ಮ ಹೋರಾಟ ಮುಂದುವರೆಯುತ್ತದೆ.

(ಗೊಂದಲ)

ಶ್ರೀ ಕೆ.ಜೆ. ಜಾರ್ಜ್ : ನೀವು ಹೇಳಿದ ಹಾಗೆ ಸಿ.ಬಿ.ಐ. ತನಿಖೆಗೆ ಕೊಟ್ಟು ಬಿಡುವುದಕ್ಕಾಗುತ್ತದೆಯೇ?

(ಗೊಂದಲ)

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಮಾನ್ಯ ಅಧ್ಯಕ್ಷರೆ, ನನ್ನದೊಂದು ಮನವಿ.

(ಗೊಂದಲ)

ಅಧ್ಯಕ್ಷರು : ಈಗ ನೀವು ಒಂದು ಹಂತಕ್ಕೆ ನಿಲ್ಲಿಸಬೇಕು.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಸತ್ತವರ ಮೇಲೆ ರಾಜಕೀಯ ಮಾಡುವುದು,

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಪ್ರಾಮಾಣಿಕ ಅಧಿಕಾರಿಯ ನಿಗೂಢ ಸಾವಾಗಿದೆ. ಇದು ತನಿಖೆ ಆಗಬೇಕು.

(ಗೊಂದಲ)

ಅಧ್ಯಕ್ಷರು : ದಯವಿಟ್ಟು ಈಗ ಆಯವ್ಯಯದ ಮೇಲೆ ಚರ್ಚೆಯಾಗಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ನಾವು ಮಾಡುತ್ತೇವೆ. (ಗೊಂದಲ) ಜನ ಸಾಯುತ್ತಿದ್ದಾರೆ, ಅಧಿಕಾರಿಗಳು ಸಾಯುತ್ತಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಂದು ನಿಮಿಷ. ಏನು ಹೇಳಿ.

(ಮುಂದು . . . .)

18.03.2015/11.40(5)DL.HS

ತಿದ್ದುಪಡಿಯಾಗದ – ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ನನ್ನ ಮನವಿ ಏನೆಂದರೆ, ಒಬ್ಬ ಪ್ರಾಮಾಣಿಕ ಅಧಿಕಾರಿಯ ಸಾವಿನ ಹಿಂದೆ ಈಗ ಒಂದೊಂದು ಕ್ಷಣಕ್ಕೂ ಹಲವಾರು ರೀತಿಯ ಅನುಮಾನಗಳು, ಸಂಶಯಗಳ ಹುತ್ತ ಬೆಳೆಯುತ್ತಿದೆ. ನಾವು ಸರ್ಕಾರದ ಮೇಲೆ ಚಾರ್ಜ್ ಮಾಡಿಲ್ಲ. ವಿರೋಧಪಕ್ಷದಲ್ಲಿ ನಾವು ಅವರ ಸಾವಿಗೆ ಸರ್ಕಾರ ಕಾರಣ ಎಂದು ಸದನದಲ್ಲಿ ಹೇಳಿದ್ದೇವೆಯೇ? ಇವತ್ತಿನ ದಿವಸ ಈ ಪ್ರಕರಣದ ಬಗ್ಗೆ ವಿರೋಧಪಕ್ಷದ ಸದಸ್ಯರಿಗಿಂತ ಹೆಚ್ಚಾಗಿ ಈ ಪ್ರಕರಣವನ್ನು CBI ಗೆ ಕೊಡಬೇಕೆಂದು ನಾಡಿನ ಜನತೆಯಲ್ಲಿರತಕ್ಕಂಥ ಭಾವನೆ ಆಗಿದೆ. ನಾಡಿನ ಅಮಾಯಕ ಪ್ರಜೆ ವಿಷಯವೇ ಗೊತ್ತಿಲ್ಲದೆ ಇರತಕ್ಕಂಥ ಜನ ಇವತ್ತು ಬೀದಿಯಲ್ಲಿ ಚರ್ಚೆ ಮಾಡುತ್ತಿದ್ದಾರೆ, ಕೂಗಾಡುತ್ತಿದ್ದಾರೆ. ನಿನ್ನೆ ನಡೆದ ಡಿ.ಕೆ.ರವಿಯವರ ಅಂತ್ಯಕ್ರಿಯೆಯಲ್ಲಿ ಸರ್ಕಾರದ ಪರವಾಗಿ ಗೌರವವನ್ನು ಸೂಚಿಸುವುದಕ್ಕೆ ಬಂದಂಥ ಮಂತ್ರಿಗಳಿಗೂ ಅಲ್ಲಿ ಸಾರ್ವಜನಿಕ ಅಭಿಪ್ರಾಯ ಏನಿತ್ತು ಎಂದು ಅವರ ಅನುಭವಕ್ಕೆ ಬಂದಿದೆ. ಈ ಪ್ರಕರಣದಲ್ಲಿ ರಾಜಕಾರಣ ಇಲ್ಲ. ಈಗಾಗಲೇ ಅವರ ಕುಟುಂಬದ ತಂದೆ-ತಾಯಿಗಳು ಹೇಳಿಕೆ ಕೊಟ್ಟಿದ್ದಾರೆ, ಅವರ ಮಾವ ಹೇಳಿಕೆ ಕೊಟ್ಟಿದ್ದಾರೆ. ಸರ್ಕಾರಕ್ಕೆ ಈ ವಿಷಯದಲ್ಲಿ ಯಾರನ್ನು ರಕ್ಷಣೆ ಮಾಡಬೇಕಾಗಿದೆ? ಇದರಲ್ಲಿ ರಕ್ಷಣೆ ಮಾಡಬೇಕಾದಂಥ ಅವಶ್ಯಕತೆ ಇದೆಯೇ? ಈ ವಿಷಯದಲ್ಲಿ ಯಾರೂ ಒಪ್ಪುವುದಿಲ್ಲ. ಇದು CBI ಗೆ ಹೋಗಬೇಕೆಂದು ಸಾರ್ವಜನಿಕವಾಗಿ ಅಭಿಪ್ರಾಯ ಇದೆ.

(ಗೊಂದಲ)

ಅಧ್ಯಕ್ಷರು: ತನಿಖೆ ನಡೆಯಲಿ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್(ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ನಮ್ಮ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲವೆಂದರೆ ನಾವು ಏನು ಮಾಡುವುದಕ್ಕೆ ಆಗುತ್ತದೆ? ಸರ್ಕಾರ ನಡೆಸುವುದು ಹೇಗೆ? ನಮ್ಮ ಕರ್ನಾಟಕದ ಅಧಿಕಾರಿಗಳ ಮೇಲೆ ನಿಮಗೆ ನಂಬಿಕೆ ಇಲ್ಲವೆಂದರೆ ಕರ್ನಾಟಕ ಸರ್ಕಾರವನ್ನು ಯಾವ ರೀತಿ ನಡೆಸುವುದಕ್ಕೆ ಆಗುತ್ತದೆ? ನಿಮ್ಮ ಕಾಲದಲ್ಲಿ CBI ನವರು ನಡೆಸಿದ್ದಾರೆಯೇ? ಅಥವಾ ನೀವೇ ನಡೆಸಿದ್ದೀರಾ?

**18-03-2015**

(ಗೊಂದಲ)

ಶ್ರೀ ಆರ್. ಅಶೋಕ್: ಮಾನ್ಯ ಅಧ್ಯಕ್ಷರೆ, ಇಂಥ ಪ್ರಕರಣ ಯಾವಾಗಲೂ ನಡೆದಿರಲಿಲ್ಲ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ದಕ್ಷ ಅಧಿಕಾರಿಗಳು ಇದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಮಾನ್ಯ ಅಧ್ಯಕ್ಷರೆ, ಬಿಹಾರ, ಉತ್ತರ ಪ್ರದೇಶದಲ್ಲಿ ಆಗುವಂಥ ಘಟನೆಗಳನ್ನು ಪ್ರಾರಂಭ ಮಾಡಿದ್ದಾರೆ. ಅಲ್ಲಿ ಆಗುವಂಥ ಘಟನೆಗಳು ಈ ರಾಜ್ಯದಲ್ಲಿ ಪ್ರಾರಂಭ ಆಗಿವೆ.

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಕುಮಾರಸ್ವಾಮಿಯವರೆ, . . .

(ಗೊಂದಲ)

(ಈ ಹಂತದಲ್ಲಿ ಸದನದ ಬಾವಿಯಲ್ಲಿದ್ದ ಶಾಸಕರು 'ಪ್ರಕರಣವನ್ನು ಮುಚ್ಚಿ ಹಾಕುತ್ತಿರುವ ಸರ್ಕಾರಕ್ಕೆ ಧಿಕ್ಕಾರ' ಎಂದು ಘೋಷಣೆಯನ್ನು ಕೂಗಿದರು)

(ಗೊಂದಲ)

ಶ್ರೀ ಎನ್.ಹೆಚ್.ಕೋನರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹ ಮಂತ್ರಿಯವರು ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡುತ್ತಿದ್ದಾರೆ.

(ಗೊಂದಲ)

ಶ್ರೀ ಹೆಚ್.ಡಿ.ಕುಮಾರಸ್ವಾಮಿ: ಇದರಲ್ಲಿ ಸರ್ಕಾರದ ತಪ್ಪು ಏನೂ ಇಲ್ಲವೆಂದ ಮೇಲೆ ನಿಮಗೆ ಏಕೆ ಭಯ? ಇದನ್ನು CBI ಗೆ ಕೊಡುವುದಕ್ಕೆ ನಿಮಗೆ ಏಕೆ ಆತಂಕ?

(ಗೊಂದಲ)

ಶ್ರೀ ಕೆ.ಜೆ.ಜಾರ್ಜ್: ಮಾನ್ಯ ಅಧ್ಯಕ್ಷರೆ, ಇವರಿಗೆ ಸಂಸ್ಕೃತಿ ಇಲ್ಲ. ಕರ್ನಾಟಕದ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲ. ಹೀಗಾದರೆ, ಸರ್ಕಾರವನ್ನು ಹೇಗೆ ನಡೆಸುವುದಕ್ಕೆ ಆಗುತ್ತದೆ? ಮಾನ್ಯ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಕುಮಾರಸ್ವಾಮಿಯವರೆ, ನೀವು ಹೇಳಿದ ಹಾಗೆ ನಡೆಸಬೇಕೆಂದರೆ ನೀವು ಇಲ್ಲಿಗೆ ಬನ್ನಿ. ಇಲ್ಲಿ ಕುಳಿತಾಗ ಸರ್ಕಾರ ನಾವು ಹೇಳಿದಂತೆ ಆಗಬೇಕು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್: ಕುಂಬಳಕಾಯಿ ಕಳ್ಳ ಎಂದರೆ Home Ministerರವರು ಹೆಗಲು ಮುಟ್ಟಿ ನೋಡಿಕೊಂಡರು.

(ಗೊಂದಲ)

ಅಧ್ಯಕ್ಷರು: ಮಾನ್ಯ ಸಚಿವರೆ ಸಾಕು ಬಿಡಿ. ಆ ಕ್ಷೇತ್ರದವರು ಮಾತನಾಡಿ. ಏನು ಹೇಳಿ. ಯಾರ ಮಾತೂ ಕೇಳಿಸುತ್ತಿಲ್ಲವಲ್ಲ.

(ಗೊಂದಲ)

ಶ್ರೀ ಡಿ.ನಾಗರಾಜಯ್ಯ: ಮಾನ್ಯ ಅಧ್ಯಕ್ಷರೆ, ಡಿ.ಕೆ.ರವಿ ಎನ್ನುವವರು ನನ್ನ ಕ್ಷೇತ್ರದಲ್ಲಿ ಹುಟ್ಟಿ, ಬಡ ಕುಟುಂಬದಿಂದ ಬಂದವರು. ಇವತ್ತಿನ ದಿವಸ ಸರ್ಕಾರ ಮತ್ತು ಸಾರ್ವಜನಿಕವಾಗಿ ಏನು ಈ ಒಂದು ಗೊಂದಲ ಪ್ರಾರಂಭ ಆಗುತ್ತಿದೆಯೋ ಆ ಗೊಂದಲ ಪ್ರಾರಂಭ ಆಗುವಂಥ ರೀತಿಯಲ್ಲಿ ಬಡತನದಿಂದ ಬಂದಂಥ ರವಿ ನಡೆದುಕೊಂಡಿರತಕ್ಕಂಥದ್ದು ಅಲ್ಲ. ಇವತ್ತಿನ ದಿವಸ ಸರ್ಕಾರ CBI ಗೆ . .

(ಗೊಂದಲ)

ಶ್ರೀ ಪಿ.ಎಂ.ನರೇಂದ್ರಸ್ವಾಮಿ: ಮಾನ್ಯ ಅಧ್ಯಕ್ಷರೆ, ರಘುಪತಿ ಭಟ್‌ರವರ ಧರ್ಮಪತ್ನಿ ಆತ್ಮಹತ್ಯೆ ಮಾಡಿಕೊಂಡಾಗ ಮಾನ್ಯ ಅಶೋಕ್‌ರವರೆ ಗೃಹಸಚಿವರಾಗಿದ್ದರು. ಅವತ್ತು ಅಂತರ್‌ರಾಜ್ಯದಲ್ಲಿ ತನಿಖೆ ನಡೆಯಿತು. ಈ ರಾಜ್ಯದ ಪೊಲೀಸ್‌ರವರೇ ಆವತ್ತು ತನಿಖೆ ಮಾಡಿದರು. ಈ ರೀತಿ ಮಾತನಾಡುವುದಕ್ಕೆ ಅವರಿಗೆ ನಾಚಿಕೆ ಆಗಬೇಕು. ಅವತ್ತು ಏನು ಮಾಡುತ್ತಿದ್ದರು? ಅವರೇ Home Minister ಆಗಿದ್ದರು. ಆವತ್ತು ಏನು ಮಾಡಿದರು? ಆವತ್ತು ಇವರು CBI ಗೆ ಕೊಟ್ಟಿದ್ದರೇ?



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 3-00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**( ಸದನವು ಬೆಳಿಗ್ಗೆ 11 ಗಂಟೆ 44 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 3.00 ಗಂಟೆಗೆ ಸೇರಲು ನಿಶ್ಚಯಿಸಿತು.)**

18-03-2015/3-20/08/HRV/SSD

**(ಸದನವು ಮಧ್ಯಾಹ್ನ 3 ಗಂಟೆ 20 ನಿಮಿಷಕ್ಕೆ ಪುನಃ ಸಮಾವೇಶಗೊಂಡಿತು. ಅಧ್ಯಕ್ಷಪೀಠದಲ್ಲಿ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಉಪಸ್ಥಿತರಿದ್ದರು)**

**(ಸದನದ ಬಾವಿಯಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಮತ್ತು ಜೆ.ಡಿ(ಎಸ್) ಪಕ್ಷದ ಸದಸ್ಯರುಗಳು ಧರಣಿಯಲ್ಲಿ ಮುಂದುವರೆಸಿದ್ದರು)**

ಶ್ರೀ ಆರ್.ವಿ. ದೇಶಪಾಂಡೆ:-ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮತ್ತು ಕುಮಾರಸ್ವಾಮಿಯವರಿಗೆ ನಾನು ವಿನಂತಿ ಮಾಡುತ್ತೇನೆ. ಹಲವಾರು ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವುದಿದೆ. ಇಡೀ ರಾಜ್ಯದಲ್ಲಿ ಕುಡಿಯುವುದಕ್ಕೆ ನೀರಿಲ್ಲವೆಂದು ಹೇಳುತ್ತೀರಿ, ಚಿಕ್ಕಬಳ್ಳಾಪುರದಲ್ಲಿ, ಕೋಲಾರದಲ್ಲಿ, ದಯಮಾಡಿ ಇದರ ಬಗ್ಗೆ ಚರ್ಚೆ ಮಾಡಿ.

ಅಧ್ಯಕ್ಷರು:-ಈಗ ಒಂದು ಪ್ರಕಟಣೆಯಿದೆ.

## ಪ್ರಕಟಣೆ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ವಿಧಾನಸಭಾ ಸದಸ್ಯರಾದ ಶ್ರೀ ಸಂತೋಷ್ ಎಸ್. ಲಾಡ್ ಅವರು, ವೈಯಕ್ತಿಕ ಕಾರಣದ ಹಿನ್ನಲೆಯಲ್ಲಿ, ದಿನಾಂಕ: 13-03-2015 ರಿಂದ ಪ್ರಸಕ್ತ ನಡೆಯುತ್ತಿರುವ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ.

ಮಾನ್ಯ ಸದಸ್ಯರು, ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

ಶ್ರೀ ಸಂತೋಷ್ ಎಸ್. ಲಾಡ್ ಅವರು ದಿನಾಂಕ 13-03-2015 ರಿಂದ ಪ್ರಸಕ್ತ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):-ಸರ್ಕಾರದ ನಡೆವಳಿಕೆಯ ಬಗ್ಗೆ ಅವರು ಬೇಸರಗೊಂಡು ಸದನಕ್ಕೂ ಬರುವುದಕ್ಕೆ ತಯಾರಿಲ್ಲ.

ಅಧ್ಯಕ್ಷರು:-ಈಗ ಅವೆಲ್ಲಾ ಸಾಕು.

ಶ್ರೀ ಆರ್.ವಿ. ದೇಶಪಾಂಡೆ:-ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ಹೇಳಿ ಸಾರ್. important issues ಇದೆ. ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡಲಿ. ಹೊರಗೆ ಹೋಗಿ ಬಜೆಟ್ ಮೇಲೆ ಟೀಕೆ ಮಾಡುತ್ತೀರಿ. ಅದಕ್ಕಿಂತಲೂ ಸದನದಲ್ಲಿ ಮಾಡಲಿ. ನಮಗೂ ಗೊತ್ತಾಗುತ್ತದೆ ಎಲ್ಲಿ ಏನಾಗಿ ದೆಯೆಂದು. ಹೊರಗೆ ಮಾಡಿದರೆ ಏನು ಗೊತ್ತಾಗುವುದಿಲ್ಲ. ನೀವು ಇಲ್ಲಿ ಚರ್ಚೆ ಮಾಡಿ. ಏಕೆ block ಮಾಡುತ್ತೀರಿ. ಈ ಪ್ರಕಾರ ನೀವು ಮಾಡುವುದು ಸರಿಯಲ್ಲ. ಇದು ಪ್ರಜಾಪ್ರಭುತ್ವ ಪದ್ಧತಿಯೂ ಅಲ್ಲ.

**( ಗೊಂದಲ )**

ಅಧ್ಯಕ್ಷರು:-ವಿರೋಧ ಪಕ್ಷದ ನಾಯಕರೆ ಏನು ಈಗ ಪ್ರಶ್ನೋತ್ತರ ನಡೆಸೋಣವೇ ಬೇಡವೆ?

Sri R.V.DESHPANDE : It is more politically motivated.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೆ, ಇವತ್ತು ಈ ವಿಷಯ ಬಹಳ ಪ್ರಮುಖವಾಗಿದ್ದು ಇಡೀ ರಾಜ್ಯದ ಜನ ಸದನದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದಾರೆ ಮತ್ತು ಈ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸರ್ಕಾರದವರು ಏನು ಮಾಡುತ್ತಿದ್ದಾರೆ ಎಂಬುದನ್ನು ನೋಡುತ್ತಿದ್ದಾರೆ. ಇಷ್ಟು

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ಸೂಕ್ಷ್ಮವಾದಂಥ ವಿಚಾರ ಮತ್ತು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾದಂಥ ವಿಚಾರದ ಬಗ್ಗೆ ಸರ್ಕಾರ ಬಹಳ ಅಸಡ್ಡೆಯಾಗಿ ನಡೆದುಕೊಳ್ಳುತ್ತಿದೆ. ಬಹುಷ: ಇವರಿಗೆ ಏನಾದರೂ ಮಾನ ಮರ್ಯಾದೆ ಇದ್ದಿದ್ದರೆ, ಈ ಸರ್ಕಾರಕ್ಕೆ ಇದ್ದರೆ ತಕ್ಷಣವೇ ಸಿ.ಬಿ.ಐ. ತನಿಖೆಗೆ ಒಪ್ಪಿಕೊಳ್ಳುತ್ತಿದ್ದರು.

**( ಗೊಂದಲ )**

ಶ್ರೀ ಆರ್.ವಿ. ದೇಶಪಾಂಡೆ:-ಈ ಪ್ರಕಾರ ನೀವು ಬಾಯಿಗೆ ಬಂದ ಹಾಗೆ ಮಾತನಾಡಬಾರದು.

**( ಗೊಂದಲ )**

ಶ್ರೀ ಸಿ.ಟಿ. ರವಿ:-ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಕೊಡಿ.

**( ಗೊಂದಲ )**

ಅಧ್ಯಕ್ಷರು:-ವಿರೋಧ ಪಕ್ಷದ ನಾಯಕರೆ, ನೋಡಿ ನಿಮ್ಮ ಅಭಿಪ್ರಾಯಗಳನ್ನು ತುಂಬಾ ಪ್ರಸ್ತುತವಾಗಿ ಮತ್ತು ಎದ್ದು ಕಾಣುವ ರೀತಿಯಲ್ಲಿ ಎಲ್ಲವನ್ನು ಹೇಳಿದ್ದೀರಿ. ಸರ್ಕಾರವು ಕೂಡ ಅವರ ಅಭಿಪ್ರಾಯವನ್ನು ಎತ್ತಿ ಹಿಡಿದಿದ್ದಾರೆ. ಈಗ ಸದನ ನಡೆಯಬೇಕಲ್ಲ.

ಶ್ರೀ ಜಗದೀಶ್ ಶೆಟ್ಟರ್:-ಮಾನ್ಯ ಅಧ್ಯಕ್ಷರೆ, ಪ್ರಕರಣವನ್ನು ಮುಚ್ಚಿ ಹಾಕುವುದಕ್ಕೆ ಹೊರಟಿದ್ದಾರೆ. ಆ ಕುಟುಂಬದ ಸದಸ್ಯರಾದ ಅವರ ತಂದೆಯವರು ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಕೊಡಿ ಎಂದು ಹೇಳುತ್ತಾರೆ. ಅದೇ ರೀತಿ ಆ ಕುಟುಂಬದ ಸದಸ್ಯರು, ಸಂಬಂಧಿಕರು, ಅವರ ಅಭಿಮಾನಿಗಳು, ಜನಸಾಮಾನ್ಯರು ಈ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಕೊಡಬೇಕೆಂದು ಹೇಳುತ್ತಿದ್ದಾರೆ. ವಿರೋಧ ಪಕ್ಷದವರಾದ ನಾವು ಮಾತ್ರ ಇದನ್ನು ಹೇಳುತ್ತಿರುವುದಲ್ಲ.

ಅಧ್ಯಕ್ಷರು:-ಏನ್ರೀ ಸರ್ಕಾರದ ಕಡೆಯಿಂದ ಏನಾದರೂ ಹೇಳುವುದಿದೆಯೇನ್ರಿ?

ಶ್ರೀ ಕೆ.ಜೆ. ಜಾರ್ಜ್(ಗೃಹ ಸಚಿವರು):-ಅವರುಗಳೆ ಬಂದು ಇಲ್ಲಿ ಕುಳಿತುಕೊಂಡು ಮಾಡಿ ಇದನ್ನೆಲ್ಲ, ಸರ್ಕಾರ ಏಕೆ, ಕಾನೂನು ಏಕೆ, ಸಂವಿಧಾನ ಏಕೆ, ಆಲದ ಮರದ ಕೆಳಗಡೆ ಕುಳಿತುಬಿಟ್ಟು ಮಾಡಿ ಪಂಚಾಯತಿ. ಇದಕ್ಕೆ ಸದನ ಏಕೆ ಬೇಕು, ಸರ್ಕಾರ ಏಕೆ ಇರುವುದು, ಪೋಲಿಸ್ ಏಕೆ ಇರುವುದು?

**( ಗೊಂದಲ )**



ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ಶ್ರೀ ಜಗದೀಶ್ ಶೆಟ್ಟರ್:-ಸಿ.ಒ.ಡಿ. ಅಧಿಕಾರಿ . . . .

ಅಧ್ಯಕ್ಷರು:-ಈಗ ಪ್ರಶ್ನೋತ್ತರವನ್ನು ಸರ್ಕಾರದ ಕಡೆಯಿಂದ ಸದನದ ಮುಂದೆ ಮಂಡಿಸುವುದು. ನಿನ್ನೆ ಮತ್ತು ಇವತ್ತಿನದೆರಡನ್ನು ಮಂಡಿಸಿ.

## ಪ್ರಶ್ನೋತ್ತರ

ಶ್ರೀ ಟಿ.ಬಿ. ಜಯಚಂದ್ರ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):-ಮಾನ್ಯ ಅಧ್ಯಕ್ಷರೆ, ದಿನಾಂಕ 18-03-2015 ರ ಹನ್ನೆರಡನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 221 ಪ್ರಶ್ನೆಗಳ ಪೈಕಿ 160 ಪ್ರಶ್ನೆಗಳ ಉತ್ತರಗಳನ್ನು ಹಾಗೂ ದಿನಾಂಕ 17-03-2015 ರ ಹನ್ನೊಂದನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 188 ಪ್ರಶ್ನೆಗಳ ಪೈಕಿ 140 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:-ಮಂಡಿಸಲಾಯಿತು.

**( ಗೊಂದಲ )**

ಅಧ್ಯಕ್ಷರು:-ಎಲ್ಲಿಯವರೆವಿಗೂ ಇದೇ ರೀತಿ ಮಾಡುವುದು ನಾಯಕರೆ, ನಮ್ಮನ್ನು ಸಂಕಟದಿಂದ ಪಾರು ಮಾಡಿ. ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ಜಗದೀಶ್ ಶೆಟ್ಟರ್:-ಸರ್ಕಾರ ಪ್ರತಿಷ್ಠೆ ತೋರಿಸುತ್ತಿದೆ. ಸರ್ಕಾರದ ಅಸಡ್ಡೆಯಿಂದಾಗಿ ಸದನ smooth ಆಗಿ ನಡೆಯುವಂಥದ್ದನ್ನು ಈ ರೀತಿ stall ಮಾಡುವಂಥದ್ದು, ಸರ್ಕಾರದ ಅಸಡ್ಡೆಯಿಂದ ನಡೆಯುತ್ತಿದೆ. ಮುಖ್ಯಮಂತ್ರಿಗಳ ಮೇಲೆ ಆಪಾದನೆಯಿಲ್ಲ, ಮಂತ್ರಿಗಳ ಮೇಲೆ ಆಪಾದನೆಯಿಲ್ಲ,

**( ಗೊಂದಲ )**

ಶ್ರೀ ಅಶೋಕ್ ಎಂ. ಪಟ್ಟಣ್:-ನಿಮ್ಮ ಸರ್ಕಾರವಿದ್ದಾಗ ನಾವು ಮೂರು ದಿನ ಧರಣಿ ಕುಳಿತಿದ್ದೆವು ಸಿ.ಬಿ.ಐ. ತನಿಖೆಗೆ ಪ್ರಕರಣವನ್ನು ಕೊಡಬೇಕೆಂದು. ನೀವು ಸಿ.ಬಿ.ಐ. ತನಿಖೆಗೆ ಕೊಟ್ಟರೆ? ನಮ್ಮ

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ಕರ್ನಾಟಕದ ಪೋಲಿಸಿನವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹಿಂದೆ ಗೃಹ ಮಂತ್ರಿಗಳಾಗಿದ್ದ ಅಶೋಕ್‌ರವರೇ ಹೇಳಿದ್ದಾರೆ. ನಮ್ಮ ದೇಶದೊಳಗೇ ಒಳ್ಳೆಯ ಪ್ರಶಂಸೆಯನ್ನು ತೆಗೆದುಕೊಂಡಿದ್ದಾರೆಂದು ಅವರೇ ಹೇಳಿದ್ದಾರೆ. ಪೋಲಿಸ್‌ನವರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆಂದು ಹಿಂದಿನ ಗೃಹ ಸಚಿವರೇ ಹೇಳಿದ್ದಾರೆ.

**( ಗೊಂದಲ )**

ಅಧ್ಯಕ್ಷರು:-ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

**(ಸದನವು ಮಧ್ಯಾಹ್ನ 3 ಗಂಟೆ 26 ನಿಮಿಷಕ್ಕೆ ಮುಂದೂಡಿ ಮತ್ತೆ ದಿನಾಂಕ 19-3-2015 ರ ಗುರುವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

**18-03-2015**

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.

ತಿದ್ದುಪಡಿಯಾಗದ - ಪ್ರಕಟಣೆಗಾಗಿ ಅಲ್ಲದ. / Uncorrected - Not for Publication.